ಸೃಜನಶೀಲ ಕಾರ್ಯಾಗಾರಗಳ ಮೂಲಕ ಪೌರತ್ವ

ಉಮಾಶಂಕರ ಪೆರಿಯೋಡಿ

ಮಕ್ಕಳು ಒಂದಷ್ಟು ವಿಷಯಗಳನ್ನು ಕಲಿಯುವ ಜೊತೆಗೆ ಸೃಜನ-ಶೀಲತೆ ತೋರಿಸುವ ಮೂಲಕ ಮೋಜನ್ನು ಅನುಭವಿಸುವಂತೆ ಮಾಡುವುದಕ್ಕಾಗಿ ಮೂರು ದಿನಗಳ ಸೃಜನಶೀಲತೆ ಕಾರ್ಯಾಗಾರವನ್ನು ಸುರಪುರ ಜಿಲ್ಲೆಯಲ್ಲಿ ಆಯೋಜಿಸಲಾಗಿತ್ತು. ಇದು ನಮ್ಮ ಪಾಲಿಗೆ ದೊಡ್ಡ ಸವಾಲಿನ ವಿಷಯವಾಗಿತ್ತು. ಈ ಕಾರ್ಯಾಗಾರದಲ್ಲಿ ಮಕ್ಕಳೊಂದಿಗೆ ಮೂರು ಪ್ರಮುಖ ಕೆಲಸಗಳನ್ನು ಮಾಡಲು ನಾವು ಯೋಜನೆ ಹೂಡಿದ್ದೆವು. ಮೊದಲನೆಯದು ಅವರನ್ನು ಹೆಚ್ಚು ಜವಾಬ್ದಾರರನ್ನಾಗಿಸುವುದು, ಎರಡನೆಯದು ಸಮುದಾಯದ / ಸಾರ್ವಜನಿಕ ಆಸ್ತಿಯನ್ನು ಸೂಕ್ಷ್ಮತೆಯಿಂದ ಬಳಸುವುದು ಮತ್ತು ಮೂರನೆಯದು ಸಂವಾದವನ್ನು ಸಂವಹನ ಮತ್ತು ಸಮಸ್ಯೆ ಪರಿಹಾರದ ಮುಖ್ಯ ಪ್ರಕ್ರಿಯೆಯಾಗಿ ಬಳಸುವುದು. ಆದರೆ ಇದನ್ನು ಮಾಡಬೇಕಾದರೆ ಅವರೆಲ್ಲರೂ ಸಮಾನರು ಎನ್ನುವ ಭಾವನೆಯನ್ನು ಅವರಲ್ಲಿ ಮೂಡಿಸಬೇಕಿತ್ತು.

ಸಮಾನತೆಯ ಭಾವನೆ

ಮಕ್ಕಳಲ್ಲಿ ಮುಖ್ಯವಾಗಿ ಸಮಾನತೆಯ ಭಾವನೆ ಮೂಡಬೇಕು, ಅವರ ಮಾತನ್ನು ಆಲಿಸಲಾಗುತ್ತದೆ ಮತ್ತು ಅವರಲ್ಲಿ ಯಾವುದೇ ತಾರತಮ್ಯವಿಲ್ಲ ಎಂಬ ಚಿಂತನೆಯು ಅವರಲ್ಲಿ ಬರಬೇಕು ಎಂದು ನಾವು ಭಾವಿಸಿದೆವು. ಇದನ್ನು ಮಾಡುವುದಕ್ಕಾಗಿ ಅವರು ನೆಲದಲ್ಲಿ ವೃತ್ತಾಕಾರದಲ್ಲಿ ಕುಳಿತುಕೊಳ್ಳುವಂತೆ ಮಾಡಿದೆವು. ಇದು ಎಲ್ಲರೂ ಕಾಣುವಂತೆ ಮಾಡುತ್ತದೆ ಹಾಗು ಎಲ್ಲರೂ ಸಮಾನರು ಎಂಬುದನ್ನು ಅರಿತುಕೊಳ್ಳಲು ಮಕ್ಕಳಿಗೆ ಸಹಕಾರಿಯಾಗುತ್ತದೆ. ಸುಗಮಕಾರರು ಸಹ ಅವರೊಂದಿಗೆ ವೃತ್ತಾಕಾರದಲ್ಲಿಯೇ ಕುಳಿತುಕೊಳ್ಳುತ್ತಾರೆ. ಇಲ್ಲಿ ಯಾರೂ ಕೊನೆಯ ಬೆಂಚಿನಲ್ಲಿ ಕುಳಿತುಕೊಳ್ಳುವುದಿಲ್ಲ. ಇಲ್ಲಿ ಯಾರೂ ನಾಯಕರಿಲ್ಲ. ಎಲ್ಲರೂ ಮುಂಭಾಗದಲ್ಲಿಯೇ ಇದ್ದಾರೆ. ಮಾತನಾಡುವ ವ್ಯಕ್ತಿಯು ಮುಂದಾಳತ್ವ ವಹಿಸುತ್ತಾನೆ ಹಾಗು ಪ್ರತಿಯೊಬ್ಬರಿಗೂ ಮಾತನಾಡುವ ಅವಕಾಶವಿರುತ್ತದೆ.

ನಂತರ ನಾವು ಇನ್ನೊಂದು ನಿಯಮವನ್ನು ರೂಪಿಸಿದೆವು: ಯಾರಾದರೂ ಒಬ್ಬರು ಮಾತನಾಡುವಾಗ ಉಳಿದವರು ಕೇಳಬೇಕು ಮತ್ತು ಆ ವ್ಯಕ್ತಿಯು ಮಾತನಾಡುವುದನ್ನು ಮುಗಿಸಿದ ನಂತರವೇ ಇತರರು ಮಾತನಾಡಬೇಕು. ಯಾರಾದರೂ ಒಬ್ಬರು ಮಾತ-ನಾಡುವಾಗ ಇತರರು ಆ ವ್ಯಕ್ತಿಯತ್ತ ನೋಡಬೇಕು. ಅನೇಕ ಜನರು ಮಾತನಾಡಲು ಇಚ್ಛಿಸಿದರೆ ಅವರು ತಮ್ಮ ಕೈಗಳನ್ನು ಎತ್ತಬೇಕು ಮತ್ತು ಸುಗಮಕಾರರು ಸರದಿಯಂತೆ ಪ್ರತಿಯೊಬ್ಬರಿಗೂ ಮಾತನಾಡಲು ಅವಕಾಶ ಮಾಡಿಕೊಡುತ್ತಾರೆ. ಇತರರನ್ನು ಕೇಳುವುದು ಈ ಆಸನ ವ್ಯವಸ್ಥೆಯ ಮುಖ್ಯ ಅನುಕೂಲತೆಯಾಗಿತ್ತು. ಯಾರಿಗಾದರೂ ಏನಾದರೂ ಹೇಳಲು ಅಥವಾ ಘೋಷಿಸಲು ಇದ್ದರೆ ಇದನ್ನು ವೃತ್ತದಲ್ಲಿಯೇ ಮಾಡಲಾಗುತ್ತಿತ್ತು. ನಿಧಾನವಾಗಿ, ಅಡ್ಡಿಪಡಿಸುವ ಘಟನೆಗಳು ಇಳಿಮುಖವಾಗುತ್ತಲೇ ಹೋದವು. ಇಲ್ಲಿ ಪುನರಾವರ್ತನೆಯಾದ ಮುಖ್ಯ ಅಂಶವೆಂದರೆ – ಆ ವ್ಯಕ್ತಿಯು ಮೊದಲಿಗೆ ಮುಗಿಸಲಿ ಎನ್ನುವುದು. ಯಾರಾದರೂ ಮಾತನಾಡಿಲ್ಲ ಎಂದು ತಂಡವು ಭಾವಿಸಿದರೆ ಆ ವ್ಯಕ್ತಿಯ ಅಭಿಪ್ರಾಯಕ್ಕಾಗಿ ಸದಸ್ಯರು ಬೆರಳು ತೋರಿಸುತ್ತಿದ್ದರು. ಈ ರೀತಿ ಎಲ್ಲರಿಗೂ ಮಾತನಾಡುವ ಅವಕಾಶವಿತ್ತು ಹಾಗು ಎಲ್ಲರೂ ಅವರನ್ನು ಕೇಳುತ್ತಿದ್ದಾರೆ ಎನ್ನುವ ಭಾವನೆಯು ಅತ್ಯಂತ ಪ್ರಮುಖ ವಿಚಾರ ಎನಿಸಿತು.

ಜವಾಬ್ದಾರಿಯುತ ವ್ಯಕ್ತಿ

ಆರಂಭದಲ್ಲಿ, ಕಾರ್ಯಾಗಾರದಲ್ಲಿ ಅವ್ಯವಸ್ಥೆ ಇತ್ತು. ಮಕ್ಕಳು ವಸ್ತುಗಳನ್ನು ಬಳಸಿ ಎಲ್ಲೆಡೆ ಬೇಕಾಬಿಟ್ಟಿಯಾಗಿ ಬಿಟ್ಟು ಹೋಗುತ್ತಿದ್ದರು. ಅವರು ಬಂದು ತಮ್ಮ ಚೀಲಗಳನ್ನು ಎಲ್ಲೆಂದರಲ್ಲಿ ಇಟ್ಟು ಬಿಡುತ್ತಿದ್ದರು. ಅವರಿಗೆ ಬೈಯ್ಯಲು ನಮಗೆ ಸಾಧ್ಯವಾಗುತ್ತಿರಲಿಲ್ಲ. ಮೆಲುದನಿಯಲ್ಲಿ ಹೇಳಿದರೆ ಅವರು ಕೇಳುತ್ತಿರಲಿಲ್ಲ. ನಾವು ಈ ವಿಷಯವನ್ನು ವೃತ್ತದೊಳಗೆ ತಂದೆವು. ನಾವು ಒಟ್ಟಾರೆ ವಸ್ತುಗಳನ್ನು ಎಸೆದರೆ ಏನಾಗುತ್ತದೆ, ಒಂದು ಸ್ಥಳವನ್ನು ಏಕೆ ಚೆನ್ನಾಗಿ ಇಡಬೇಕು ಮತ್ತು ಈ ವರ್ತನೆಯಿಂದ ಇತರರಿಗೆ ಹೇಗೆ ಅನನುಕೂಲತೆ ಉಂಟಾಗುತ್ತದೆ ಹಾಗು ನಾವು ಹೇಗೆ ಜವಾಬ್ದಾರಿಯಿಂದ ವರ್ತಿಸಬೇಕು ಎನ್ನುವ ಕುರಿತು ಚರ್ಚೆಯು ಕೇಂದ್ರೀಕರಿಸಿತ್ತು. ನಾವಾಗಿಯೇ ಇದನ್ನು ಅರಿತುಕೊಂಡು ಈ ಕೆಲಸವನ್ನು ಮಾಡಬೇಕು. ಬೇರೆ ಯಾರೋ ಹೇಳಿದರು ಎನ್ನುವ ಕಾರಣಕ್ಕೆ ಇದನ್ನು ಮಾಡುವುದಲ್ಲ. ಮಕ್ಕಳು ಇದನ್ನು ಅರ್ಥ ಮಾಡಿಕೊಂಡರು ಮತ್ತು ತಾವು ಬಳಸುವ ವಸ್ತುಗಳ ಕುರಿತು ಎಚ್ಚರಿಕೆ ವಹಿಸಿದರು. ಅವರು ತಮ್ಮ ಚಪ್ಪಲಿಗಳನ್ನು ತರಗತಿ ಕೊಠಡಿಯ ಹೊರಗೆ ಸಾಲಾಗಿ ಇಟ್ಟರು, ಬಣ್ಣದ ಬ್ರಶ್‌ಗಳನ್ನು ಬಳಸಿದ ನಂತರ ಸ್ವಚ್ಛಗೊಳಿಸಿದರು, ಕರಿಹಲಗೆಯನ್ನು ಒರೆಸಿದರು, ಸರಿಯಾದ ಸಮಯಕ್ಕೆ ಬಂದರು ಹಾಗು ಸಕಾಲದಲ್ಲಿ ತಮ್ಮ ಕೆಲಸವನ್ನು ಮುಗಿಸಿದರು. ನಿಧಾನವಾಗಿ, ಒಂದರ ನಂತರ ಒಂದರಂತೆ ಅವರ ವರ್ತನೆಯಲ್ಲಿ ಬದಲಾವಣೆ ಉಂಟಾಯಿತು. ಆರಂಭದಲ್ಲಿ, ಪರಸ್ಪರರ ಕುರಿತು ಸಾಕಷ್ಟು ದೂರುಗಳು ಬರುತ್ತಿದ್ದವು. ಆದರೆ ಮಕ್ಕಳು ಜವಾಬ್ದಾರಿಯುತವಾಗಿ ವರ್ತಿಸಲು ಪ್ರಾರಂಭಿಸಿದ ಕಾರಣ ದೂರುಗಳ ಸಂಖ್ಯೆಯಲ್ಲಿ ಇಳಿಮುಖವಾಯಿತು. ಅವರು ಪರಸ್ಪರ ಪರಿಣಾಮಕಾರಿಯಾಗಿ ನಿಭಾಯಿಸಿದರು.

ಸಮುದಾಯದ ಸಂಪತ್ತುಗಳನ್ನು ರಕ್ಷಿಸುವುದು

ಮಕ್ಕಳು ಸಾರ್ವಜನಿಕ ಸಂಪನ್ಮೂಲಗಳ ಕುರಿತು ಬಹುಮಟ್ಟಿಗೆ ಅಸಡ್ಡೆ ಹೊಂದಿದ್ದರು ಎಂಬುದನ್ನು ನಾವು ಗಮನಿಸಿದೆವು. ನೀರನ್ನು ಕುಡಿದು ಲೋಟವನ್ನು ಸರಿಯಾದ ಸ್ಥಳದಲ್ಲಿ ಇಡುತ್ತಿರಲಿಲ್ಲ, ಕ್ರೀಡಾ ಸಾಮಗ್ರಿಗಳನ್ನು ಬಳಸಿದ ನಂತರ ವಾಪಸ್ ತಂದು ಇಡುತ್ತಿರಲಿಲ್ಲ ಹಾಗು ಶೌಚಾಲಯವನ್ನು ಸ್ವಚ್ಛವಾಗಿ ಇಡುತ್ತಿರಲಿಲ್ಲ. ಸಾರ್ವಜನಿಕ ಸೊತ್ತಿನ ಕುರಿತು ನಾವು ಹೇಗೆ ಕಾಳಜಿ ವಹಿಸಬೇಕು ಎನ್ನುವ ಬಗ್ಗೆ ನಾವು ದೀರ್ಘವಾದ ಚರ್ಚೆಯನ್ನು ಮಾಡಿದೆವು. ಇತರರಿಗಾಗಿಯೂ

ನಾವು ಸ್ಥಳವನ್ನು ಸ್ವಚ್ಛವಾಗಿ ಇಡಬೇಕು ಎನ್ನುವ ಪ್ರಮುಖ ವಿಷಯವನ್ನು ಮಕ್ಕಳು ಅರ್ಥ ಮಾಡಿಕೊಂಡರು. ಪ್ರತಿ ಬಾರಿಯೂ ನಾವು ಒಂದು ಪ್ರಶ್ನೆಯನ್ನು ಕೇಳುತ್ತಿದ್ದೆವು: ನಾವು ಬಳಸಿದ ಸ್ಥಳವನ್ನು ಇತರರು ನಂತರ ಬಳಸುವಂತೆಯೇ ಬಿಟ್ಟು ಹೋಗುತ್ತಿದ್ದೇವೆಯೇ? ಇದಕ್ಕಾಗಿ ಸಾಕಷ್ಟು ಶ್ರಮ ಹಾಕಬೇಕಾಯಿತು. ಮಕ್ಕಳು ಇದನ್ನು ಅಷ್ಟು ಸುಲಭವಾಗಿ ಅರ್ಥ ಮಾಡಿಕೊಳ್ಳುತ್ತಿರಲಿಲ್ಲ ಅಥವಾ ಮರೆತು ಬಿಡುತ್ತಿದ್ದರು. ಮೆಲ್ಲನೆ ಅವರು ಅದನ್ನು ಮಾಡಲು ಪ್ರಾರಂಭಿಸಿದರು. ಅತ್ಯಂತ ಪರಿಣಾಮಕಾರಿ ಎನಿಸಿದ ಪ್ರಗತಿ ಏನೆಂದರೆ, ಏನೆಲ್ಲ ಮಾಡಬೇಕು ಎನ್ನುವುದನ್ನು ಮಕ್ಕಳು ಪರಸ್ಪರರ ಗಮನ ಸೆಳೆಯಲು ಪ್ರಾರಂಭಿಸಿದರು. ಮಕ್ಕಳು ಸಾರ್ವಜನಿಕ ಸ್ಥಳಗಳು ಮತ್ತು ಸಮುದಾಯದ ಸೊತ್ತುಗಳ ಕಾಳಜಿ ವಹಿಸಲು ಕಲಿತುಕೊಂಡರು.

ಚರ್ಚೆಯ ಮೂಲಕ ಸಮಸ್ಯೆಗಳನ್ನು ಪರಿಹರಿಸುವುದು

ಮಕ್ಕಳ ನಡುವೆ ಜಗಳ ಉಂಟಾಗುವುದು ಸಾಮಾನ್ಯ ವಿಷಯವಾಗಿತ್ತು. ತೀರಾ ಕ್ಷುಲ್ಲಕ ವಿಚಾರಗಳಿಗಾಗಿ ಅವರು ಜಗಳ ಮಾಡುತ್ತಿದ್ದರು. ಕೆಲವೊಮ್ಮೆ ಸಣ್ಣ ವಿಷಯಗಳಿಗಾಗಿ ದೊಡ್ಡ ಜಗಳವೇ ಉಂಟಾಗುತ್ತಿತ್ತು. ಅಪರೂಪಕ್ಕೆ ಮಕ್ಕಳು ಶಿಕ್ಷಕರ ಜೊತೆಗೂ ಜಗಳವಾಡುತ್ತಿದ್ದರು. ನಾವು ಈ ಕುರಿತು ಏನನ್ನಾದರೂ ಮಾಡಲು ಇಚ್ಛಿಸಿದ್ದೆವು. ಏಕೆಂದರೆ ಜಗಳ ಮಾಡದಂತೆ ನಾವು ಅವರನ್ನು ವಿನಂತಿಸಿದಾಗ ಅವರು ಒಪ್ಪಿಕೊಳ್ಳುತ್ತಿದ್ದರು. ಆದರೆ ತಕ್ಷಣವೇ ಏನಾದರೂ ಒಂದು ಪ್ರಚೋದನೆ ಉಂಟಾಗಿ ಮತ್ತೆ ಜಗಳವಾಡುತ್ತಿದ್ದರು. ನಂತರ ಪ್ರತಿಯೊಂದರ ಕುರಿತು ವೃತ್ತಾಕಾರದಲ್ಲಿ ಕುಳಿತು ಮಾತನಾಡುವ ಪ್ರಕ್ರಿಯೆಯನ್ನು ನಾವು ಪ್ರಾರಂಭಿಸಿದೆವು. ಮಕ್ಕಳು ಗಮನವಿಟ್ಟು ಕೇಳುತ್ತಿದ್ದರು ಹಾಗು ವೃತ್ತದಲ್ಲಿ ಏನನ್ನು ನಿರ್ಧರಿಸಲಾಗುತ್ತದೆಯೋ ಅದನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಪ್ರತಿಯೊಬ್ಬರ ಅಭಿಪ್ರಾಯವನ್ನು ಆಲಿಸಲಾಯಿತು ಹಾಗು ಪ್ರತಿಯೊಬ್ಬರ ಸಮ್ಮತಿಯೊಂದಿಗೆ ಒಂದು ನಿರ್ಧಾರವನ್ನು ತೆಗೆದುಕೊಳ್ಳಲಾಯಿತು. ಅವರು ಇದಕ್ಕೆ ಬದ್ಧರಾಗಬೇಕಾಗಿತ್ತು. ಯಾವುದೇ ಸಂಘರ್ಷ, ವಿಚಾರ ಅಥವಾ ಸಮಸ್ಯೆಯನ್ನು ವೃತ್ತಕ್ಕೆ ತಂದು, ಚರ್ಚಿಸಿ ಪರಿಹರಿಸಲಾಗುತ್ತಿತ್ತು. ಸಂವಾದಕ್ಕೆ ಪ್ರಾಮುಖ್ಯತೆ ನೀಡಲಾಗುತ್ತಿತ್ತು. ಇದನ್ನು ಅನುಸರಿಸುವುದು ಮಕ್ಕಳ ಪಾಲಿಗೆ ಅತ್ಯಂತ ಕಷ್ಟಕರ ಕೆಲಸವಾಗಿತ್ತು. ಸಂಘರ್ಷವು ಉಂಟಾದಾಗ ಅವರು ತಕ್ಷಣವೇ ಜಗಳವಾಡುತ್ತಿದ್ದರು ಮತ್ತು ಪರಿಹರಿಸುತ್ತಿದ್ದರು. ಆದರೆ ಸಂವಾದವನ್ನು ನಡೆಸಲು ನಾವು ನಿರಂತರವಾಗಿ ಒತ್ತಾಯಿಸಿದ ಕಾರಣ, ಪರಸ್ಪರ ಜಗಳವಾಡುವ ಬದಲು ಒಲ್ಲದ ಮನಸ್ಸಿನಿಂದ ಪರಸ್ಪರ ಮಾತನಾಡಲು ಪ್ರಾರಂಭಿಸಿದರು. ಕೆಲ ಸಮಯದ ನಂತರ, ಸಮಸ್ಯೆಯನ್ನು ಪರಿಹರಿಸುವ ವಿಧಾನವಾಗಿ ಮಕ್ಕಳು ಸಂವಾದವನ್ನು ಬಳಸಿಕೊಳ್ಳಲು ಪ್ರಾರಂಭಿಸಿದರು. ಮತ್ತೆ ಏನಾಯಿತು ಎಂದರೆ, ಎರಡು ಮಕ್ಕಳು ಪರಸ್ಪರ ಮಾತ–ನಾಡುವುದನ್ನು ಬಿಟ್ಟು ಜಗಳವಾಡಲು ಪ್ರಾರಂಭಿಸಿದಾಗ ಇತರ ಮಕ್ಕಳು ಮಧ್ಯಪ್ರವೇಶಿಸುತ್ತಿದ್ದರು ಹಾಗು ಚರ್ಚೆಯ ಮೂಲಕ ಸಮಸ್ಯೆಯನ್ನು ಪರಿಹರಿಸುವಂತೆ ಮಾಡುತ್ತಿದ್ದರು. ಇದು ಸಂಪೂರ್ಣವಾಗಿ ಯಶಸ್ವಿಯಾಗದೆ ಇದ್ದರೂ, ಒಂದಷ್ಟು ಮಟ್ಟಿಗೆ ಮಕ್ಕಳು ಸಂವಾದವನ್ನು ಒಪ್ಪಿಕೊಳ್ಳುವಂತೆ ಮಾಡಿದೆವು. ಈ ಸೃಜನಶೀಲತೆ ಕಾರ್ಯಾಗಾರವನ್ನು ನಾವು ಅನೇಕ ವರ್ಷಗಳ ಕಾಲ ನಡೆಸಿದೆವು. ನಾವು ಎಲ್ಲಾ ಶಾಲೆಗಳಲ್ಲಿ ಯಶಸ್ಸು ಸಾಧಿಸಿದ್ದೇವೆ ಎಂದು ಹೇಳಲಾಗದು. ಅಲ್ಪಾವಧಿಗೆ ನಾವು ಸೃಜನಶೀಲತೆ ಕಾರ್ಯಾಗಾರವನ್ನು ನಡೆಸಿದ ಶಾಲೆಗಳಲ್ಲಿ ಈ ವಿಧಾನವು ಯಶಸ್ವಿಯಾಗಿಲ್ಲ. ಆದರೆ ನಾವು ಮತ್ತೆ ಹೋಗಿ ಈ ಕಾರ್ಯವನ್ನು ನಿರಂತರವಾಗಿ ಮಾಡಿದಾಗ ಈ ಪ್ರಕ್ರಿಯೆಯು ಸಂಪೂರ್ಣವಾಗಿ ಅಲ್ಲದಿದ್ದರೂ ಬಹುಮಟ್ಟಿಗೆ ಯಶಸ್ವಿಯಾಯಿತು.

ಫಲಿತಾಂಶಗಳು

ಈ ಪ್ರಕ್ರಿಯೆಯು ಯಶಸ್ವಿಯಾದ ಶಾಲೆಗಳಲ್ಲಿ, ತಮ್ಮನ್ನು ಜವಾಬ್ದಾರಿಯುತ ನಾಗರಿಕರಾಗಿ ರೂಪಿಸುವ ಕೆಲವು ಸಂಪ್ರದಾಯಗಳನ್ನು ಮಕ್ಕಳು ಅನುಸರಿಸುವುದನ್ನು ನಾವು ನೋಡಿದೆವು. ಸಮಾನತೆಯ ಭಾವನೆಯು ಇದರಲ್ಲಿ ಪ್ರಮುಖವಾಗಿತ್ತು ಹಾಗು ಒಮ್ಮೆ ಮನವರಿಕೆಯಾದ ನಂತರ ಮಕ್ಕಳು ಇದನ್ನು ಚೆನ್ನಾಗಿ ಅನುಸರಿಸಿದರು. ವೃತ್ತದ ಪರಿಕಲ್ಪನೆಯೂ ಚೆನ್ನಾಗಿ ಕೆಲಸ ಮಾಡಿತು. ಏಕೆಂದರೆ ಮಕ್ಕಳು ವೃತ್ತಾಕಾರದಲ್ಲಿ ಕುಳಿತುಕೊಳ್ಳುವುದನ್ನು ಇಷ್ಟಪಟ್ಟರು ಹಾಗು ವೃತ್ತದಲ್ಲಿರುವ ಪ್ರತಿಯೊಬ್ಬರೂ ಮಾತನಾಡಲು ಪ್ರಾರಂಭಿಸಿದರು. ಈ ಪ್ರಕ್ರಿಯೆಯಲ್ಲಿ ಗಮನಿಸಬೇಕಾದ ಅತ್ಯಂತ ಪ್ರಮುಖ ಅಂಶವೆಂದರೆ ಪರಸ್ಪರರ ಅಭಿಪ್ರಾಯವನ್ನು ಕೇಳುವುದು. ಇದು ಮಕ್ಕಳಲ್ಲಿ ನಾವು ಸಾಧಿಸಿದ ಅತ್ಯಂತ ಯಶಸ್ವಿ ಗುಣಸ್ವಭಾವವಾಗಿದೆ ಎಂದು ನಾವು ಭಾವಿಸಿದ್ದೇವೆ. ಜವಾಬ್ದಾರಿಯುತವಾಗಿ ವರ್ತಿಸುವುದು ಮತ್ತು ಸಮುದಾಯದ ಸಂಪನ್ಮೂಲಗಳನ್ನು ರಕ್ಷಿಸುವುದು – ಈ ಎರಡು ಅಂಶಗಳನ್ನು ಮಕ್ಕಳು ಮೆಲ್ಲನೆ ಅರ್ಥ ಮಾಡಿಕೊಂಡರು ಹಾಗು ಒಂದಷ್ಟು ಮಟ್ಟಿಗೆ ಅನುಸರಿಸುವಲ್ಲಿ ಯಶಸ್ವಿಯಾದರು. ಯಾರಾದರೂ ಒಬ್ಬ ವಿದ್ಯಾರ್ಥಿ/ನಿ ಮರೆತು ಬಿಟ್ಟರೆ ಉಳಿದ ವಿದ್ಯಾರ್ಥಿಗಳು ಆತನಿಗೆ/ಆಕೆಗೆ ನೆನಪಿಸುತ್ತಿದ್ದುದು ಇಲ್ಲಿನ ಪ್ರಮುಖ ಚಾಲಕ ಶಕ್ತಿಯಾಗಿತ್ತು. ಯಾರಿಗೆ ನೆನಪಿಸಲಾಗಿದೆಯೋ ಅವರು ಯಾವುದೇ ಪ್ರತಿರೋಧ ತೋರದೆ ಅದನ್ನು ಮಾಡುತ್ತಿದ್ದರು. ಮಕ್ಕಳನ್ನು ಸಂವಾದದಲ್ಲಿ ತೊಡಗುವಂತೆ ಮಾಡುವುದು ಕಾರ್ಯಾಗಾರಗಳ ಅತ್ಯಂತ ಸವಾಲಿನ ಭಾಗವಾಗಿತ್ತು. ಮಕ್ಕಳು ಏಕೋ ಈ ಪ್ರಕ್ರಿಯೆಯ ಪ್ರಾಮುಖ್ಯತೆಯನ್ನು ಅರಿತುಕೊಳ್ಳಲಿಲ್ಲ. ಈ ಪ್ರಕ್ರಿಯೆಯಲ್ಲಿ ನಾವು ಕೂಡ ಸಾಕಷ್ಟು ಹೆಣಗಾಡಿದೆವು. ಹೀಗಾಗಿ ಸಂವಾದವು ತೀರಾ ಕಡಿಮೆ ಪರಿಣಾಮಕಾರಿ ಎನಿಸಿತು. ನಾವು ಈ ವಿಚಾರದಲ್ಲಿ ಇನ್ನಷ್ಟೇ ಹಿಡಿತ ಸಾಧಿಸಬೇಕಿದೆ. ಸೃಜನಶೀಲತೆ ಕಾರ್ಯಾಗಾರ ಮತ್ತು ಪೌರತ್ವ ಶಿಕ್ಷಣದ ಅನುಭವವು ನಮ್ಮ ಪಾಲಿಗೂ ಕಲಿಕೆಯ ಅದ್ಭುತ ಮೂಲ ಎನಿಸಿತು. ಪೌರತ್ವ ಶಿಕ್ಷಣವನ್ನು ಅಲ್ಪಾವಧಿಯಲ್ಲಿ ಕಲಿಸಲು ಆಗದು. ಇದನ್ನು ನಿರಂತರವಾಗಿ ಮತ್ತು ಪುನರಾವರ್ತಿತವಾಗಿ ಮಾಡಬೇಕು. ಬೇರೆಬೇರೆ ಗುಂಪುಗಳಲ್ಲಿ ಬೇರೆಬೇರೆ ವಿಚಾರಗಳು/ಪರಿಕಲ್ಪನೆಗಳು ಕೆಲಸ ಮಾಡುತ್ತವೆ. ಯಾವುದು ಯಶಸ್ವಿಯಾಗುತ್ತದೆ ಮತ್ತು ಯಾವುದು ಯಶಸ್ವಿಯಾಗುವುದಿಲ್ಲ ಎನ್ನುವುದಕ್ಕೆ ಯಾವುದೇ ಸಿದ್ಧ ಮಾದರಿ ಇಲ್ಲ. ಸುಗಮಕಾರರು ಉತ್ತೇಜನೆಯ ಪ್ರಮುಖ ಮೂಲ ಎನಿಸುತ್ತಾರೆ. ಸುಗಮಕಾರರು ತಾನು ಪ್ರತಿಪಾದಿಸುತ್ತಿರುವುದನ್ನು ಪಾಲಿಸದೆ ಇದ್ದರೆ ಉದ್ದೇಶವು ಯಶಸ್ವಿಯಾಗುವುದಿಲ್ಲ. ಹೀಗಾಗಿ ಮಕ್ಕಳೊಂದಿಗೆ ನಿರಂತರವಾಗಿ ಇರುವುದು, ಪ್ರಜಾತಾಂತ್ರಿಕ ಬದುಕಿನ ಈ ಕಲ್ಪನೆಗಳನ್ನು ಅನುಸರಿಸುವುದು ಮತ್ತು ಅವರಿಗೂ ಜ್ಞಾಪಿಸುವುದು ಹಾಗು ಅವರಿಗೆ ತೋರಿಸಿಕೊಡುವುದು ಅವರು ಇವನ್ನೆಲ್ಲ ಮೈಗೂಡಿಸಿಕೊಳ್ಳಲು ಇರುವ ಏಕೈಕ ದಾರಿಯಾಗಿದೆ.



ಉಮಾಶಂಕರ ಪೆರಿಯೋಡಿ ಅವರು ಅಜೀಂ ಪ್ರೇಮ್‌ಜಿ ಫೌಂಡೇಶನ್‌ನ ಕರ್ನಾಟಕ ರಾಜ್ಯದ ಮುಖ್ಯಸ್ಥರಾಗಿದ್ದಾರೆ. ಅಭಿವೃದ್ಧಿ ಅಧ್ಯಯನ ಕ್ಷೇತ್ರದಲ್ಲಿ ಅವರಿಗೆ ಮೂವತ್ತು ವರ್ಷಕ್ಕೂ ಮಿಕ್ಕಿದ ಅನುಭವವಿದೆ. ಅವರು ರಾಷ್ಟ್ರೀಯ ಸಾಕ್ಷರತಾ ಅಭಿಯಾನ (National Literacy Campaign) ಮತ್ತು ಕರ್ನಾಟಕದ ಬಿ.ಆರ್. ಬೆಟ್ಟದ ಬುಡಕಟ್ಟು ಶಿಕ್ಷಣ ವಿಚಾರದಲ್ಲಿ ವಿಶೇಷ ಕೊಡುಗೆ ನೀಡಿದ್ದಾರೆ. 'ಬರಿಗಾಲ ಸಂಶೋಧನೆ' ಎಂದು ಅವರೇ ಕರೆದುಕೊಳ್ಳುವಂತೆ ತಳ ಹಂತದ ಕ್ಷೇತ್ರ ಕಾರ್ಯಕರ್ತರು ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ತರಬೇತಿ ನೀಡುತ್ತಿದ್ದಾರೆ. ಅವರು ಕರ್ನಾಟಕ ರಾಜ್ಯ ಶಿಕ್ಷಕರ ಸಮುದಾಯದ ಸಂಸ್ಥಾಪಕ ಸದಸ್ಯರು. ಅವರನ್ನು eriodi@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಕುಶಾಲ್** । ಪರಿಶೀಲನೆ: **ನಾಗಮಣಿ ಎಸ್.ಎನ್.**